# ✳ ವನಸುಮದೊಲೆನ್ನ ಜೀವನವು ವಿಕಸಿಸುವಂತೆ... ✳

**ಕೆ.ಬಿ. ಸದಾನಂದ**

ಶ್ರೀಯುತ ಸದಾನಂದರು ಸಸ್ಯ-ಪ್ರಾಣಿ ಜಗತ್ತುಗಳ ಆರಾಧಕರು, ಪರಿಸರ ತಜ್ಞರು. ಈ ಸಂಚಿಕೆಯ ಮುಖಪುಟವನ್ನು ಕಂಡು, ಸಂತಸದಿಂದ ಈ ವಿಶಿಷ್ಟ ಹೂವಿನ ಕುರಿತು ಮಾಹಿತಿಯನ್ನು ಓದುಗರಿಗೆ ನೀಡಿದ್ದಾರೆ. ಇವರು ಮೈಸೂರಿನ ನಿವಾಸಿಗಳು ಹಾಗೂ ಪರಿಸರ ಸಂರಕ್ಷಣೆಯಲ್ಲಿ ನಿರತರಾಗಿರುವವರು.

ಕಳೆದೆರಡು ತಿಂಗಳುಗಳಿಂದ ತನ್ನ ಹೂಗಳ ಸ್ನಿಗ್ಧ ನೀಲ ಸೌಂದರ್ಯದಿಂದ ಜನಮನವನ್ನು ಸೂರೆಗೈದ ವನ್ಯಸಸ್ಯವೊಂದು ಇದೀಗ ಮತ್ತೆ ದೀರ್ಘನಿದ್ರೆಗೆ ಇಳಿಯುವ ಸನ್ನಾಹದಲ್ಲಿದೆ. ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಪಶ್ಚಿಮ ಘಟ್ಟಗಳ ಕೆಲವು ಪ್ರದೇಶಗಳನ್ನು- ಪ್ರಮುಖವಾಗಿ ತಮಿಳುನಾಡಿನ ನೀಲಗಿರಿಯ ಮುಕುರ್ತಿ, ಕೊಡೈಕ್ಕಾನಲ್, ಕೇರಳದ ಮುನ್ನಾರ್, ರಾಜಮಲೈ ಮತ್ತು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ, ಕೆಮ್ಮಣ್ಣುಗುಂಡಿ ಮುಂತಾದೆಡೆಗಳ ಗಿರಿಶಿಖರಗಳನ್ನು ತನ್ನ ನೀಲಿ ಹೊದಿಕೆಯಿಂದ ಮುಚ್ಚಿ ಒಂದು ರೀತಿಯ ಅಲೌಕಿಕ ಪರಿಸರವನ್ನು ನಿರ್ಮಿಸಿದ್ದ ಈ ಕಾಡುಗಿಡದ ಹೆಸರು 'ನೀಲಕುರಿಂಜಿ'. ಈ ಗಿಡ ಹಲವಾರು ವರ್ಷಗಳಿಗೊಮ್ಮೆ ಸಾಮೂಹಿಕವಾಗಿ ಹೂ ಬಿಡುವ ತನ್ನ ಸೋಜಿಗದ ಲಕ್ಷಣಕ್ಕೆ ಹೆಸರಾಗಿದೆ. ಉದಕಮಂಡಲದ ಗಿರಿಶ್ರೇಣಿಗೆ ನೀಲಗಿರಿ ಎಂಬ ಹೆಸರು ಬಂದಿರುವುದಕ್ಕೆ ಈ ಗಿಡವೇ ಕಾರಣ. ಏಕೆಂದರೆ ಇದು ಹೂಬಿಟ್ಟಾಗ ಇಡೀ ಬೆಟ್ಟಸಾಲುಗಳೇ ನೀಲಿ ಬಣ್ಣವನ್ನು ತಳೆಯುತ್ತವೆ.

ನೀಲಕುರಿಂಜಿ ಸಸ್ಯ ವೈಜ್ಞಾನಿಕವಾಗಿ ಅಕ್ಯಾಂತೇಸೀ ಕುಟುಂಬಕ್ಕೆ ಸೇರಿದ್ದು ಸ್ಟ್ರೋಬೈಲಾಂತಸ್ ಎಂಬ ಲ್ಯಾಟಿನ್ ಹೆಸರಿನಿಂದ ಪ್ರಸಿದ್ಧವಾಗಿದೆ. ೧೯೧೫ರಿಂದ ೧೯೩೫ರ ಅವಧಿಯಲ್ಲಿ ಮದ್ರಾಸ್ ಪ್ರಾಂತ್ಯದ ಸಸ್ಯಸಂಕುಲದ ಬಗ್ಗೆ ವಿವರವಾದ ಪುಸ್ತಕ ರಚಿಸಿದ ಬ್ರಿಟಿಷ್ ಸಸ್ಯತಜ್ಞ ಜೆ.ಎಸ್. ಗ್ಯಾಂಬಲ್ ಎಂಬುವರ ಪ್ರಕಾರ ಈ ಜಾತಿಯಲ್ಲಿ ಸುಮಾರು ೪೬ ಬಗೆಗಳಿದ್ದು ಇವುಗಳ ಪೈಕಿ ಕೆಲವು ಬಗೆಗಳು ಪ್ರತಿ ವರ್ಷ ಹೂಬಿಡುವುವಾದರೆ ಇನ್ನು ಕೆಲವು ೩, ೫, ೭ ವರ್ಷಗಳಿಗೊಮ್ಮೆ, ಮತ್ತೆ ಕೆಲವು ೧೦, ೧೨, ೧೬ ವರ್ಷಗಳಿಗೊಮ್ಮೆ ಹೂಬಿಡುವಂಥವಾಗಿವೆ. ಇವೆಲ್ಲವೂ ಪ್ರಧಾನವಾಗಿ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ ಮಾತ್ರ ಬೆಳೆಯುವಂಥವು. ಪೂರ್ವ ಘಟ್ಟಗಳಲ್ಲೂ ಕೆಲವು ದೊರೆಯುತ್ತವೆ. ಕೆಲವೆಡೆ ತೆಳುನೀಲಿಯ ಬಣ್ಣ, ಕೆಲವೆಡೆ ಕಡುನೀಲಿಯ ಬಣ್ಣ ಮತ್ತೆ ಬೇರೆಡೆ ಕೆಂಪು ಮಿಶ್ರಿತ ನೀಲಿ ಅಥವಾ ಬಿಳಿಯ ಹೂಗಳನ್ನು ಈ ಸಸ್ಯಜಾತಿ ಹೊಂದಿರುತ್ತದೆ. ಅಲ್ಲಿಯ ಹವಾಮಾನ, ಖನಿಜಾಂಶಗಳೇ ಈ ವೈವಿಧ್ಯಕ್ಕೆ ಕಾರಣವಿರಬಹುದು. ಇತರ



ನೀಲಕುರಿಂಜಿ ಹೂವು

ಗಿಡಗಳಿಂದ ಪ್ರತ್ಯೇಕಿಸಿಕೊಂಡು ಉಳಿಯಲು ಬಳಸುವ ವಿಕಾಸದ ವಿಶಿಷ್ಟತೆಯೂ ಇದಕ್ಕೆ ಕಾರಣವಿರಬಹುದು.

ಪ್ರಸಕ್ತ ವರ್ಷದಲ್ಲಿ ಹೂತಳೆದು ಪ್ರಸಿದ್ಧಿಗೆ ಬಂದ ಕುರಿಂಜಿ ಸ್ಟ್ರೋಬೈಲಾಂತಸ್ ಕುಂತಿಯಾನಸ್ ಎಂಬ ಬಗೆಯದು. ಇದು ಮುನ್ನಾರ್, ರಾಜಮಲೈ, ಕೊಡೈಕ್ಕಾನಲ್‌ಗಳಲ್ಲಿ ಮಾತ್ರ ಕಾಣದೊರೆಯುವಂಥದು. ಚಿಕ್ಕಮಗಳೂರಿನ ಪ್ರದೇಶದಲ್ಲೂ ಅರಳಿದ ಕುರಿಂಜಿ ವಾಸ್ತವವಾಗಿ ಸ್ಟ್ರೋಬೈಲಾಂತಸ್ ಸೆಸ್ಸೈಲಿಸ್ ವೆರೈಟಿ ಸೆಸ್ಸೈಲಾಯ್ಡಿಸ್ ಎಂಬ ಬಗೆಯದು. ಆದರೆ ಎರಡೂ ನೀಲಿ ಹೂವನ್ನೇ ಬಿಡುವುದರಿಂದ ಇವಕ್ಕೆ ನೀಲಕುರಿಂಜಿ ಎಂಬ ಹೆಸರೇ ಬಂದಿದೆ. ಗಿಡಗಳ ಬಾಹ್ಯಲಕ್ಷಣಗಳಲ್ಲಿ —ಎಲೆಗಳ ಆಕಾರ, ಮೇಲ್ಮೈ, ಹೂಗಳಲ್ಲಿನ ಕೇಸರಗಳ ಸಂಖ್ಯೆ ಮುಂತಾದ ಲಕ್ಷಣಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಹಾಗೆಯೇ ಕುಂತಿಯಾನಸ್ ಬಗೆ ಹನ್ನೆರಡು ವರ್ಷಗಳಿಗೊಮ್ಮೆ ಹೂ ಬಿಟ್ಟರೆ, ಸೆಸ್ಸೈಲಿಸ್ ಬಗೆ ಯಾವಾಗ ಹೂ ಬಿಡುತ್ತದೆ ಎಂಬುದರ ಬಗ್ಗೆ

ನಿರ್ದಿಷ್ಟ ಮಾಹಿತಿಯಿಲ್ಲ. ಕೆಲವು ಪುಸ್ತಕಗಳ ಪ್ರಕಾರ ಇದು ಹೂ ಬಿಡುವುದು ಏಳು ವರ್ಷಗಳಿಗೊಮ್ಮೆ. ಆದರೆ ಅಲ್ಲಿನ ನಿವಾಸಿಗಳ ಅಭಿಪ್ರಾಯದಲ್ಲಿ ಇದು ನಾಲ್ಕು, ಹತ್ತು ಮತ್ತು ಹದಿನಾರು ವರ್ಷಗಳಿಗೊಮ್ಮೆ ಹೂ ಬಿಡುತ್ತದೆ. ಖಚಿತ ದಾಖಲೆಗಳಿಲ್ಲ.

ಆದರೆ ಒಂದು ಅಂಶವಂತೂ ನಿಜ. ಈ ಗಿಡ ಪ್ರತಿವರ್ಷ ಹೂ ಬಿಡುವುದಿಲ್ಲ. ಯಾವಾಗಲೋ ಒಮ್ಮೆ ಬಹುಶಃ ಪರಿಸರದ ಅಂಶಗಳಾದ ಆರ್ದ್ರತೆ, ಉಷ್ಣತೆ, ಬೆಳಕಿನ ಅವಧಿ, ಮಳೆಯ ಪ್ರಮಾಣ ಮುಂತಾದವು ಈ ಗಿಡಕ್ಕೆ ಸೂಕ್ತವಾಗಿದ್ದರೆ ಮಾತ್ರ ಹೂ ತಳೆಯುತ್ತದೆ. ಹೀಗೆ ಕುರಿಂಜಿ ಸಸ್ಯಲೋಕದ ಚೋದ್ಯವೆನಿಸಿದೆ. ಹೀಗಾಗಲು ಕಾರಣಗಳೇನಿರಬಹುದು? ಹೂ ಬಿಡದಿರುವಾಗ ಗಿಡ ಯಾವ ಸ್ಥಿತಿಯಲ್ಲಿರುತ್ತದೆ? ಗಿಡ ಸತ್ತೇ ಹೋಗಿರುತ್ತದೆಯೆ? ಪರಿಸರದ ಅಂಶಗಳು ಸೂಕ್ತವೆನಿಸಿದಾಗ ಮೊಳೆತು ಹೊಸ ಗಿಡಗಳು ಹುಟ್ಟುತ್ತವೆಯೇ? ಹೂ ಬಿಡಲು ಕಾರಣವಾಗುವ ಆಂತರಿಕ ಬದಲಾವಣೆಗಳೇನು? ಎಂಬ ಹತ್ತು ಹಲವಾರು ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ ಎನ್ನುತ್ತಾರೆ ಉಡುಪಿಯ ನಿವೃತ್ತ ಸಸ್ಯವಿಜ್ಞಾನಿ ಡಾ. ಗೋಪಾಲಕೃಷ್ಣ ಭಟ್ಟ ಮತ್ತು ಕಲ್ಲಿಕೋಟೆ ವಿಶ್ವವಿದ್ಯಾನಿಲಯದ ಸಸ್ಯವಿಜ್ಞಾನ ಪ್ರಾಧ್ಯಾಪಕ ಡಾ. ಮಧುಸೂದನ್ ಅವರು. ಈ ಮೇಲ್ಕಂಡ ಅಂಶಗಳ ಬಗ್ಗೆ ಸಾಕಷ್ಟು ಸಂಶೋಧನೆ ಇನ್ನೂ ನಡೆಯಬೇಕಾಗಿದೆ.

ಯಾವುದೋ ಗಹನವಾದ, ಗುಟ್ಟನ್ನು ತಮ್ಮ ಮಡಿಲಲ್ಲಿಟ್ಟುಕೊಂಡು ಈ ಗಿಡಗಳು ಎಂದೋ ಒಂದು ಬಾರಿ ಹೂ ಬಿಡುತ್ತವೆ. ಹಾಗೆ ಹೂ ಬಿಟ್ಟು, ಎಲ್ಲೆಲ್ಲೂ ಇರುವ ದೇವನ ಮೈ ಸಿಂಗರಿಸಿ, ನೋಡುವವರ ಮನಗಳಿಗೆ ಮುದ ನೀಡಿ, ಏನನ್ನೂ ಬಯಸದೆ ನಶಿಸಿಹೋಗುತ್ತವೆ. ಸಹಸ್ರಾರು ಹೂಗಳನ್ನು ಚೆಲ್ಲಿ ಪ್ರಕೃತಿಯ ಸೊಬಗನ್ನು ಹೆಚ್ಚಿಸುವುದರಲ್ಲೇ ಧನ್ಯತೆಯ ಭಾವವನ್ನು ಪಡೆಯುವಂತಿವೆ ಈ ಗಿಡಗಳು. ಸಾವಿರಾರು ಜನ ಪ್ರೇಕ್ಷಕರು ಕುತೂಹಲದಿಂದ ತಮ್ಮನ್ನು ಬಂದು ನೋಡುತ್ತಿದ್ದಾರೆ ಎಂಬ ಅರಿವಾಗಲಿ, ಹೆಮ್ಮೆ-ಬಿಗುಮಾನಗಳಾಗಲಿ ಇವಕ್ಕೆ ಇವೆಯೇ?

ಹ್ಞಾ! ಮತ್ತೊಂದು ವಿಚಾರ. ಈ ಸುಂದರ ಗಿಡಗಳ ನಡುವೆಯೇ ಪೈಪೋಟಿ ನಡೆಸುತ್ತ ಸಣ್ಣ ಪುಟ್ಟ ಹೂಗಳನ್ನು ಹೊಂದಿರುವ ಮತ್ತೂ ಅನೇಕ ಸಸ್ಯಗಳಿವೆ. ಅವುಗಳನ್ನು ನೀವು ಗಮನಿಸಿದಿರಾ? ಇಲ್ಲವೇ! ಹೋಗಲಿ ಬಿಡಿ. ಅವುಗಳು ಕುರಿಂಜಿಯೊಂದಿಗೆ ಹೋಲಿಸಿಕೊಂಡು ತಾವು ಕೀಳೆಂದು ಒಮ್ಮೆಯೂ ಭಾವಿಸಿಲ್ಲ. ನಾವೇನು ಕಡಿಮೆ? ಎಂದೇ ಸುಂದರವಾಗಿ ಅರಳಿವೆ. ಅವೂ ಭಗವಂತನ ಕಲಾಕೃತಿಗಳೇ ಅಲ್ಲವೇ? ಇವುಗಳಿಂದ ಕಲಿಯಬೇಕಾದ ಪಾಠಗಳು ಅನೇಕ. ನಾವೂ ಅವುಗಳಂತೆ ಇನ್ನೊಬ್ಬರ ಶಕ್ತಿ-ಸಾಮರ್ಥ್ಯ-ಪ್ರತಿಭೆಗಳನ್ನು ಕಂಡು ಅಸೂಯೆ ಪಡದೆ ನಮ್ಮಷ್ಟಕ್ಕೆ ನಮ್ಮ ನಮ್ಮ ಜೀವನವನ್ನು ಸುಂದರವಾಗಿಸಿಕೊಂಡು, ಸಾರ್ಥಕ ಮಾಡಿಕೊಳ್ಳೋಣ! ✪

## ಪ್ರಹಸನ ಪ್ರಸಂಗ

**ಇಬ್ಬರು** ಕಳ್ಳರು ಒಂದು ಮನೆಯೊಳಗೆ ಹೊಕ್ಕು ಲೂಟಿ ಮಾಡಲು ಪ್ರಾರಂಭಿಸಿದರು. ಒಬ್ಬ ಮತ್ತೊಬ್ಬನನ್ನು ಕೇಳಿದ, "ಎಷ್ಟು ಹಣ ದೊರೆಯಬಹುದು ಈ ಮನೆಯಲ್ಲಿ?" ಅವನು ಉತ್ತರವಿತ್ತ, "ಯಾಕಯ್ಯಾ ಯೋಚನೆ! ನಾಳೆಯ ದಿನಪತ್ರಿಕೆಗಳಲ್ಲಿ ನಮಗೆ ಎಲ್ಲ ವಿವರಗಳು ಸಿಗುವುದಿಲ್ಲವೇ!"

✹ ✹ ✹

**ಗುರು**: ಪ್ರತಿಯೊಂದು ಕ್ರಿಯೆಗೂ ಸಮನಾದ ಹಾಗೂ ವಿರುದ್ಧವಾದ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಇದು ಬಹಳ ಮುಖ್ಯ ನಿಯಮ!

ಶಿಷ್ಯ: ಸರ್! ಇದು ನನಗೆ ಚೆನ್ನಾಗಿ ಅನುಭವವಾಗಿದೆ. ನಾನು ಎಷ್ಟು ಪ್ರಯತ್ನಪಟ್ಟು ಕಲಿತರೂ ಯಾವುದೂ ನೆನಪಿನಲ್ಲಿ ಉಳಿಯುವುದೇ ಇಲ್ಲ. ಈಗ ಏಕೆಂದು ಅರ್ಥವಾಯಿತು!

✹ ✹ ✹

**ಪಕ್ಷಿ**ಗಳನ್ನು ಕುರಿತಾದ ಪ್ರಶ್ನೆಪತ್ರಿಕೆಯನ್ನು ಕಂಡ ಪ್ರಾಣಿಶಾಸ್ತ್ರದ ವಿದ್ಯಾರ್ಥಿ ಸಂಪೂರ್ಣ ಬೆವತುಹೋದ! ಪ್ರಶ್ನೆಪತ್ರಿಕೆಯಲ್ಲಿ ಒಂದಷ್ಟು ಚೌಕಗಳಲ್ಲಿ ಕಾಲುಗಳ ಚಿತ್ರವಿತ್ತು. ಕಾಲುಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಿ, ಪಕ್ಷಿಯ ಹೆಸರನ್ನು ಬರೆಯಬೇಕಿತ್ತು! ವಿದ್ಯಾರ್ಥಿ ಪತ್ರಿಕೆಯನ್ನು ಹಿಂತಿರುಗಿಸಿದಾಗ ಉಪಾಧ್ಯಾಯರು ಅದನ್ನು ನೋಡಿ, ಕೇಳಿದರು, "ಏನಯ್ಯಾ! ಉತ್ತರಗಳನ್ನು ಬರೆದೇ ಇಲ್ಲವಲ್ಲ! ನಿನ್ನ ಹೆಸರೇನು?"

ವಿದ್ಯಾರ್ಥಿ ತನ್ನ ಪ್ಯಾಂಟನ್ನು ಮೇಲೆ ಎಳೆದುಕೊಂಡು, ಕಾಲುಗಳನ್ನು ತೋರಿಸಿ ಹೇಳಿದ, "ನೀವೇ ಹೇಳಿ ನೋಡೋಣ!"

✹ ✹ ✹

**ಪಾಶ್ಚಾತ್ಯ** ಸಂಗೀತದ ಪ್ರಸಿದ್ಧ ರಚನಕಾರ ಮೊಜಾರ್ಟ್‌ನನ್ನು ಒಮ್ಮೆ ಒಬ್ಬ ಯುವಕ ಕೇಳಿದ, "ಕೃತಿಗಳನ್ನು ರಚಿಸುವುದು ಹೇಗೆ?" ಮೊಜಾರ್ಟ್ ಹೇಳಿದ, "ನೀನಿನ್ನೂ ಯುವಕ. ಮೊದಲು ಭಾವಗೀತೆಗಳನ್ನು ಬರೆಯಲು ಪ್ರಾರಂಭಿಸು." ಯುವಕ ಮತ್ತೆ ಕೇಳಿದ, "ನೀವು ಹತ್ತು ವರ್ಷಗಳ ವಯಸ್ಸಿನಲ್ಲೇ ಪ್ರಸಿದ್ಧವಾದ ಕೃತಿಗಳನ್ನು ರಚಿಸಿದಿರಲ್ಲ!" ಮೊಜಾರ್ಟ್ ಉತ್ತರಿಸಿದ, "ಹೌದು. ಆದರೆ ಅದನ್ನು ಹೇಗೆ ರಚಿಸಬೇಕೆಂದು ಮತ್ತೊಬ್ಬರನ್ನು ಕೇಳಲಿಲ್ಲ!"

✹ ✹ ✹